**ಪಾಠ-9** **ಆಗಸ್ಟ್ 21-27**

# ವಿಶ್ರಾಂತಿಯ ಲಯಬದ್ಧತೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆ.ಕಾಂಡ 1, ವಿ.ಕಾಂಡ 20:8-1, ವಿ.ಕಾಂಡ 16:14-31, ಧ.ಕಾಂಡ 15:12-15, ಕೀರ್ತ 92, ಯೆಶಾಯ 58:13.

**ಸ್ಮರಣವಾಕ್ಯ : "ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡಿದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು"** (ಆ.ಕಾಂಡ 2:3).

ಸೃಷ್ಟಿಕಾರ್ಯವು ಎಂಥದ್ದು ಎಂದು ಯಾರು ತಾನೇ ಕಲ್ಪಿಸಿಕೊಳ್ಳಬಲ್ಲರು. ಕತ್ತಲ ನಡುವೆಯೇ ಬೆಳಕು, ಚರಾಚರಗಳಿಂದ ತುಂಬಿ ತುಳುಕುವ ಸಮುದ್ರಗಳು, ತಕ್ಷಣ ಹಾರಬಲ್ಲ ಪಕ್ಷಿಗಳು.... ಹೀಗೆಯೇ ಎಲ್ಲವೂ ಅಲ್ಲವೇ? ಆದಾಮ ಮತ್ತು ಹವ್ವಳ ಅಲೌಕಿಕವಾಗಿ ಸೃಷ್ಟಿಯಾದದ್ದು? ದೇವರು ಹೇಗೆ ಮಾದಿದನೆಂದು ಗ್ರಹಿಸಲು ಸಾಧ್ಯವಿಲ್ಲ. ಆದರೆ ನಂತರ, ಎಲ್ಲಾ ಕ್ರಿಯಾಶೀಲ ಸೃಷ್ಟಿಯ ಬಳಿಕ ದೇವರು ತನ್ನ ಗಮನವನ್ನು ಮತ್ತೊಂದು ಕಡೆಗೆ ಹರಿಸಿದನು. ಮೊದಲ ನೋಟದಲ್ಲಿ ಇದು ಉಳಿದ ದಿನಗಳಷ್ಟು ರಮ್ಯವಾಗಿ ಕಾಣಲಿಲ್ಲ. ದೇವರು ಸುಮ್ಮನೆ ಒಂದು ದಿನವನ್ನು ಮಾಡಿದನು, ಏಳನೇ ದಿನ, ನಂತರ ಇದನ್ನು ವಿಶೇಷಪಡಿಸಿದನು. ಮಾನವರು ತಮ್ಮ ಜೀವಿತವನ್ನು ತಾವೇ ಇಷ್ಟೊಂದು ಪರಿಶ್ರಮದಾಯಕವಾಗಿ, ಆಯಾಸಕರವಾಗಿ ಮಾಡಿಕೊಳ್ಳುವುದಕ್ಕಿಂತ ಮುಂದೆಯೇ ದೇವರು ಇದನ್ನು ಸಜೀವವಾಗಿ ನೆನಪಿನ

* **ಈ ವಾರದ ಪಾಠವನ್ನು ಆಗಸ್ಟ್ 28ರ ಸಬ್ಬತ್ತಿಗೆ ಅಧ್ಯಯನ ಮಾಡಿರಿ ಮತ್ತು ಸಿದ್ಧಪಡಿಸಿಕೊಳ್ಳಿರಿ.**

ಸಾಧನವಾಗಿ ಇಟ್ಟನು. ದೇವರು ನಾವು ಈ ದಿನದಲ್ಲಿ ಏನನ್ನೂ ಮಾಡದೆ ವಿರಾಮವಾಗಿದ್ದು ಸಂತೋಷವಾಗಿರಬೇಕು ಎಂದು ಬಯಸುತ್ತಾನೆ– ಇದು ನಾವು ಏನನ್ನೂ ಮಾಡದ ದಿನವಾಗಿದ್ದು ದೇವರು ಕೊಟ್ಟ ಹುಲ್ಲು, ಗಾಳಿ, ಅಡವಿ ಮೃಗಗಳು, ನೀರು, ಜನರು ದೇವರು ಮಾಡಿದ ಎಲ್ಲಾ ಉತ್ತಮ ಕಾರ್ಯಗಳಲ್ಲಿ ಸಂಭ್ರಮ ಪಡಬೇಕು.

ಈ ಆಮಂತ್ರಣವು ಮೊದಲ ದಂಪತಿಗಳಾದ ಆದಾಮ ಮತ್ತು ಹವ್ವಳು ಏದೇನ್ ತೋಟದಿಂದ ನಿರ್ಗಮಿಸಿದ ನಂತರವೂ ಮುಂದುವರೆಯಿತು. ದೇವರು ಈ ಆಮಂತ್ರಣವನ್ನು ಸದಾಕಾಲವು ಶಾಶ್ವತವಾಗಿ ನಿಲ್ಲುವಂತೆ ಉದ್ದೇಶಿಸಿದನು. ಆದುದರಿಂದ ಆರಂಭದಿಂದಲೇ ಸಬ್ಬತ್ತನ್ನು ಕಾಲವೆಂಬ ವಸ್ತ್ರದಲ್ಲಿ ಹೆಣೆದಿದ್ದಾನೆ.

ಈ ವಾರದಲ್ಲಿ, ನಾವು ದೇವರ ಅದ್ಭುತವಾದ ಆಹ್ವಾನವಾಗಿರುವ ಚೈತನ್ಯಶೀಲ ವಿಶ್ರಾಂತಿಗೆ ಮತ್ತೆ ಮತ್ತೆ ಪ್ರತೀ ಏಳನೇ ದಿನದಲ್ಲಿ ಪ್ರವೇಶಿಸುವ ಬಗ್ಗೆ ಅಧ್ಯಯನ ಮಾಡುತ್ತೇವೆ.

**ಭಾನುವಾರ** **ಆಗಸ್ಟ್ 22**

## ವಿಶ್ರಾಂತಿಯ ಮುನ್ನುಡಿ (ಪೀಠಿಕೆ)

ಆದಿಯಲ್ಲಿ ದೇವರಿದ್ದನು. ದೇವರು ಮಾತಾಡಿದನು. ಅವನ ಮಾತಿನಂತೆ ಆಯಿತು. ಬೆಳಕು ದಿನವನ್ನು ಹಗಲು ರಾತ್ರಿಯಾಗಿ ವಿಭಾಗಮಾಡಿತು; ಗುಮ್ಮಟ, ಆಕಾಶ ಮತ್ತು ಸಮುದ್ರ ಇವೆಲ್ಲವೂ ಎರಡನೇ ದಿನದಲ್ಲಿ ಸೃಷ್ಟಿಗೊಂಡವು; ಒಣನೆಲ ಮತ್ತು ಸಸ್ಯವರ್ಗ 3ನೇ ದಿನದಲ್ಲಿ ಆದವು. ದೇವರು ಕಾಲದ ಮತ್ತು ಭೂಗೋಳದ ಮೂಲಕೆಲಸವನ್ನು ಮಾಡಿದನು. ನಂತರ ಅದನ್ನು ಮುಂದಿನ ಮೂರು ದಿನಗಳಲ್ಲಿ ತುಂಬುತ್ತಾ ಹೋದನು. ಆಕಾಶವನ್ನು ಹಗಲು ಮತ್ತು ರಾತ್ರಿ ಆಳುವ ಬೆಳಕುಗಳು. ಬಹುತೇಕ ಪುರಾತನ ಸಂಸ್ಕೃತಿಗಳಲ್ಲಿರುವ ಕಥೆಗಳಿಗಿಂತ ಭಿನ್ನವಾಗಿರುವ ಸತ್ಯವೇದಾನುಸಾರವಿರುವ ಸೃಷ್ಟಿಯ ವಿವರಣೆಯು ಸೂರ್ಯಚಂದ್ರ ನಕ್ಷತ್ರಗಳು ದೇವತೆಗಳಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳುತ್ತದೆ. ಅವುಗಳ ನಾಲ್ಕನೇ ದಿನದಲ್ಲಿ ಈ ಸೃಷ್ಟಿಯಲ್ಲಿ ಪ್ರವೇಶಗೊಂಡವು. ಅವು ಅವನ ಮಾತಿಗೆ ಒಳಪಟ್ಟವು.

ಮೋಶೆಯ ವರ್ಣನೆಯಂತೆ ಐದನೇ ದಿನ ಮತ್ತು ಆರನೇ ದಿನ (ಆ.ಕಾಂಡ 1:20–31) ಸಕಲ ಜೀವಸಂಕುಲ, ಸೌಂದರ್ಯ, ಪಕ್ಷಿಗಳು, ಮೀನುಗಳು, ಭೂಮಿಯ

ಮೇಲೆ ವಾಸಿಸುವ ಪ್ರಾಣಗಳು ದೇವರು ನಿರ್ಮಿಸಿದ ಜಾಗವನ್ನು ತುಂಬಿಕೊಂಡವು.

ದೇವರು ತಾನು ಮಾಡಿದ ಮೌಲ್ಯಮಾಪನವು ಸೃಷ್ಟಿಯ ಬಗ್ಗೆ ಏನನ್ನು ಸೂಚಿಸುತ್ತದೆ? ಆದಿಕಾಂಡ 1:1–31ನ್ನು ಓದಿರಿ.

ದೇವರು ಇಲ್ಲಿ ಕೇವಲ ಜಾಗವನ್ನು ಸೃಷ್ಟಿ ಮಾಡಲಿಲ್ಲ. ಆದರೆ ಅದು ಪರಿಪೂರ್ಣವಾದ ಸ್ಥಳವಾಗಿತ್ತು. ಸಕಲ ಸಂಕುಲಗಳು (ಜೀವಿಗಳು) ಭೂಮಿಯನ್ನು ತುಂಬಿಕೊಂಡವು. ಒಂದು ಹಾಡಿನ, ಮಧುರವಾದ ಪಲ್ಲವಿಯಂತೆ ದೇವರು 'ಅದು ಒಳ್ಳೆಯದಾಗಿತ್ತು' ಎಂದು ಪ್ರತಿದಿನದ ಅಂತ್ಯದಲ್ಲಿ ಹೇಳುತ್ತಾ ಹೋಗುತ್ತಾನೆ.

ದೇವರು ಮನುಷ್ಯನ ಸೃಷ್ಟಿಯನ್ನು ಉಳಿದ ಸೃಷ್ಟಿಗಿಂತ ಹೇಗೆ ಭಿನ್ನವಾಗಿ ಮಾಡಿದನು? ಆದಿಕಾಂಡ 1:26,27 ಮತ್ತು ಆ.ಕಾಂಡ 2:7, 21–24ನ್ನು ಓದಿರಿ.

ದೇವರು ಮಣ್ಣನ್ನು ರೂಪಿಸತೊಡಗಿದನು. ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ತನ್ನ ಹೋಲಿಕೆ ಸೃಷ್ಟಿ ಮಾಡಿದುದು ನಿಕಟತೆಗೂ ಸಾಮೀಪ್ಯಕ್ಕೂ ಒಂದು ವಸ್ತುನಿಷ್ಠ ಪಾಠವಾಗಿದೆ. ದೇವರು ಬಾಗಿ ಆದಾಮನ ಮೂಗಿಗೆ ಪ್ರಾಣ ವಾಯುವನ್ನು ಊದಿದನು. ಆತನು ಬದುಕುವ ಪ್ರಾಣಿಯಾದನು. ಆದಾಮನ ಪಕ್ಕೆಲುಬಿನಿಂದ ಹವ್ವಳು ವಿಶೇಷವಾಗಿ ಸೃಷ್ಟಿಯಾದುದು ಸೃಷ್ಟಿಯ ವಾರಕ್ಕೆ ಮತ್ತೊಂದು ವಿಶೇಷವಾದ ವಿಷಯ ಸೇರಿತು. ವಿವಾಹವು ಮಾನವನಿಗೆ ದೇವರು ಮಾಡಿದ ಏರ್ಪಾಟಿನ ಭಾಗವಾಗಿತ್ತು. ಇದು ಗಂಡು ಮತ್ತು ಹೆಣ್ಣಿನ ನಡುವಿನ ಪಾಲುದಾರಿಕೆಯ ಪವಿತ್ರವಾದ ನಂಬಿಕೆಯಾಗಿದೆ.

ಈವಾಗ 6ನೇ ದಿನದಲ್ಲಿ ದೇವರು ತಾನುಂಟು ಮಾಡಿದ ಪ್ರತಿಯೊಂದನ್ನು ನೋಡಿದ ಮೇಲೆ ಅವನು ಹೇಳಿದ ಮಾತು ಇನ್ನೂ ಭಿನ್ನವಾಗಿತ್ತು. ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು (ಆ.ಕಾಂಡ 1:31).

ಸತ್ಯವೇದದ ಸೃಷ್ಟಿಯ ಕಥೆಗಿಂತ ಮಾನವರು ದೇವರು ವಾಕ್ಯದ ಆಧಾರವಿಲ್ಲದೆ ಹೇಳುವ ಕಥೆಗಳು ಎಷ್ಟು ಭಿನ್ನವಾಗಿ ಆಲೋಚಿಸಿರಿ. ನಾನು ದೇವರ ವಾಕ್ಯದ ಆಧಾರದ ಮೇಲೆ ನಾವು ಸತ್ಯವನ್ನು ಅರಿಯಬೇಕು ಎಂಬುದರ ಬಗ್ಗೆ ಇದು ಏನು ಹೇಳುತ್ತದೆ?

**ಸೋಮವಾರ** **ಆಗಸ್ಟ್ 23**

# ವಿಶ್ರಾಂತಿಗೆ ಆಜ್ಞೆ

ಸೃಷ್ಟಿಯು ಬಹಳ ಒಳ್ಳೆಯದಾಗಿರಬಹುದು. ಆದರೆ ಇನ್ನೂ ಪರಿಪೂರ್ಣವಾಗಿಲ್ಲ. ಸೃಷ್ಟಿಯು ದೇವರ ವಿಶ್ರಾಂತಿಯ ಬಳಿಕ ಆಶೀರ್ವಾದ ಮತ್ತು ಏಳನೆಯ ದಿನದ ಸಬ್ಬತ್ತು ವಿಶೇಷವಾದ ಆಶೀರ್ವಾದ ಹೊಂದಿದ ಮೇಲೆ ಮುಕ್ತಾಯವಾಯ್ತು. "ಆ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು" (ಆ.ಕಾಂಡ 2:3).

ಸಬ್ಬತ್ತು ದೇವರ ಸೃಷ್ಟಿಯ ಅವಿಭಾಜ್ಯವಾದ ಭಾಗವಾಗಿದೆ. ದಿಟವಾಗಿ ಹೇಳುವುದಾದರೆ ಅದು ಸೃಷ್ಟಿಕಾರ್ಯದ ಮುಕ್ತಾಯ. ದೇವರು ವಿಶ್ರಾಂತಿಯನ್ನು ಮಾಡಿ ಸಮುದಾಯಕ್ಕೆ ಒಂದು ಸ್ಥಳವನ್ನು (ಸಮಯಾವಕಾಶವನ್ನು) ಮಾಡಿದ್ದಾನೆ. ಆವಾಗ ಮಾನವರು ತಮ್ಮ ದೈನಂದಿನ ಕೆಲಸಗಳನ್ನು ನಿಲ್ಲಿಸಿ ದೇವರ ಜೊತೆ ಜೊತೆಗೆ ವಿಶ್ರಾಂತಿ ಪಡೆಯಬೇಕು. ದುರಂತವೆಂದರೆ ಪಾಪವು ಲೋಕವನ್ನು ಪ್ರವೇಶಿಸಲಾಗಿ ಎಲ್ಲವೂ ಬದಲಾಯ್ತು. ಆವಾಗ ದೇವರ ಜೊತೆ ನೇರವಾಗಿ ಸಂವಾದಿಸುವುದು ನಿಂತುಹೋಯ್ತು. ಇದರ ಬದಲು, ನೋವಿನ ಹೆರಿಗೆಗಳು, ಶ್ರಮೆ, ಬಹಳ ಸೂಕ್ಷ್ಮದ, ಮುರಿದ ಸಂಬಂಧಗಳು, ನಿರಂತರವಾಗಿ ಸಾಲು ಸಾಲಾಗಿ ಬರುವ ಗೋಳಾಟಗಳು, ಇವೆಲ್ಲ ಬಿದ್ದುಹೋದ ಈ ಲೋಕದಲ್ಲಿ ನಮ್ಮೆಲ್ಲರಿಗೂ ಗೊತ್ತಾಗಿರುವಂಥವು. ಆದಾಗ್ಯೂ ಇವೆಲ್ಲವುದರುಗಳ ನಡುವೆ ದೇವರ ಸಬ್ಬತ್ತು ಸೃಷ್ಟಿಯ ಶಾಶ್ವತವಾದ ಗುರುತಾಗಿರುವುದಲ್ಲದೆ ಮರುಸೃಷ್ಟಿಯ ವಾಗ್ದಾನ ಮತ್ತು ನಿರೀಕ್ಷೆಯಾಗಿದೆ. ಪಾಪಕ್ಕೆ ಬೀಳುವ ಮೊದಲೇ ಮನುಷ್ಯನಿಗೆ ಸಬ್ಬತ್ತಿನ ವಿಶ್ರಾಂತಿ ಅಗತ್ಯವೆಂದ ಮೇಲೆ ನಂತರದಲ್ಲಿ ಅದು ಎಷ್ಟು ಮುಖ್ಯವಲ್ಲವೇ?

ಅನೇಕ ವರ್ಷಗಳ ನಂತರ ದೇವರು ತನ್ನ ಜನರನ್ನು ಐಗುಪ್ತರ ದಾಸತ್ವದಿಂದ ಬಿಡಿಸಿದ ಮೇಲೆ ಮತ್ತೆ ಈ ವಿಶೇಷ ದಿನವನ್ನು ಅವರಿಗೆ ನೆನಪಿಸುತ್ತಾನೆ. ವಿ.ಕಾಂಡ 20:8–11 ವಚನಗಳನ್ನು ಓದಿರಿ. ಸೃಷ್ಟಿಗೆ ಸಂಬಂಧಪಟ್ಟ ಹಾಗೆ ಈ ವಾಕ್ಯಗಳು ನಮಗೆ ಸಬ್ಬತ್ತಿನ ಪ್ರಾಮುಖ್ಯತೆಯ ಬಗ್ಗೆ ಏನು ಬೋಧಿಸುತ್ತವೆ?

ಈ ಆಜ್ಞೆಯಿಂದ ದೇವರು ನಮ್ಮ ಮೂಲವನ್ನು ನೆನಪಿಸಿಕೊಳ್ಳುವಂತೆ ಕರೆಯುತ್ತಾನೆ. ಅನೇಕರು ನಂಬುವಂತೆ ನಾವು ಕೇವಲ ಆಕಸ್ಮಿಕವಾಗಿ ಉಂಟಾದ

ಕತ್ತಲೆಯ ಶಕ್ತಿಯ ನಂಬುವಂತೆ ನಾವು ಕೇವಲ ಆಕಸ್ಮಿಕವಾಗಿ ಉಂಟಾದ ಕತ್ತಲೆಯ ಶಕ್ತಿಯ ಉತ್ಪನ್ನಗಳಲ್ಲ. ಪ್ರತಿಯಾಗಿ ನಾವು ದೇವರ ಸ್ವರೂಪ್ಯದಲ್ಲಿ ಸೃಷ್ಟಿಯಾದ ಜೀವಿಗಳು. ನಾವು ದೇವರ ಅನ್ಯೋನ್ಯತೆಯಲ್ಲಿ ಪಾಲುದಾರರಾಗುವುದಕ್ಕೆ ಸೃಷ್ಟಿಯಾದವರು. ಇಸ್ರಾಯೇಲ್ಯರನ್ನು ಕಡಿಮೆ ಮಟ್ಟದ ದಾಸರನ್ನಾಗಿ ನಡೆಸಿಕೊಂಡರೆ ಅದರಿಂದ ಬಾಧಕವಿಲ್ಲ. ಪ್ರತೀ ಸಬ್ಬತ್ತಿನಲ್ಲಿಯೂ ಒಂದು ವಿಶೇಷವಾದ ರೀತಿಯಲ್ಲಿ ಅವರು ನಿಜವಾಗಿಯೂ ಯಾರೆಂದು ನೆನಪಿಸಿಕೊಳ್ಳಲು ಕರೆಯಲ್ಪಡುತ್ತಿದ್ದರು. ಅವರು ದೇವರ ಸ್ವರೂಪದಲ್ಲೇ ಉಂಟಾದವರು.

"ಸಬ್ಬತ್ತು ಸೃಷ್ಟಿಕಾರ್ಯದ ಜ್ಞಾಪಕ (ಸ್ಮಾರಕ)ವಾಗಿರುವುದರಿಂದ ಅದು ಕ್ರಿಸ್ತನ ಪ್ರೀತಿಯ ಮತ್ತು ಶಕ್ತಿಯ ಗುರುತಾಗಿದೆ" ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ 281ನೇ ಪುಟ.

ಆರು ದಿನಗಳ ಉಪದೇಶದ ಪ್ರಾಮುಖ್ಯತೆಯ ಬಗ್ಗೆ ಆಲೋಚಿಸಿರಿ. ದೇವರು ನಮ್ಮ ಜೀವಮಾನದ ಏಳನೇ ಒಂದು ಭಾಗವನ್ನು ಪ್ರತಿವಾರ ಯಾವುದೇ ವಿನಾಯಿತಿ ಇಲ್ಲದೆ ನಂಬಬೇಕು ಎಂದು ಮಾಡಿದ ಆಜ್ಞೆಯ ಜೊತೆಗೆ ಯಾವ ಉಪದೇಶ ಮುಖ್ಯವಾಗಿದೆ? ನಮಗೆ ನಮ್ಮ ಮೂಲವನ್ನು ನೆನಪು ಮಾಡಿಕೊಳ್ಳುವುದು ಎಷ್ಟು ನಿರ್ಣಾಯಕ ಎಂಬುದನ್ನು ಆದಿಕಾಂಡ ಪುಸ್ತಕದಲ್ಲಿ ವಿವರಿಸಲ್ಪಟ್ಟಂತೆ ಈ ಸಂಗತಿಯೊಂದು ಏನನ್ನು ಬೋಧಿಸುತ್ತದೆ?

**ಮಂಗಳವಾರ** **ಆಗಸ್ಟ್ 24**

## ಹೊಸ ಸನ್ನಿವೇಶಗಳು

ಸುಮಾರು ನಾಲ್ವತ್ತು ವರ್ಷಗಳು ಅಡವಿಯಲ್ಲಿ ಅಲೆದಾಡಿದ ಬಳಿಕ ಹೊಸ ಸಂತತಿಯು ಐಗುಪ್ತದ ನೆನಪೇ ಇಲ್ಲದವರು ದೊಡ್ಡವರಾಗಿದ್ದರು. ಅವರ ತಂದೆ ತಾಯಿಗಳ ಜೀವನಾನುಭವಕ್ಕಿಂತ ಭಿನ್ನವಾದ ಅನುಭವವಿದ್ದವರು. ಈ ಹೊಸ ಸಂತತಿಯು ತಮ್ಮ ತಂದೆತಾಯಿಗಳಂತೆ ಅಪನಂಬಿಕೆಯಲ್ಲಿ ನಡೆದುಕೊಂಡದ್ದನ್ನು ನೋಡಿದ್ದರು, ಇದರ ದೆಸೆಯಿಂದ ಅವರೂ ಸಹಾ ತಮ್ಮ ತಂದೆತಾಯಿಗಳಂತೆ ಅಡವಿಯಲ್ಲಿ ಅಲೆಯುವಂತವರಾಗಿದ್ದರು. ಆ ಸಂಗತಿಯು ಅಳಿದು ಹೋಯಿತು.

ಅವರು ಹಾಕಿಕೊಂಡಿದ್ದ ಪಾಳೆಯದ ನಡುವೆ ದೇವದರ್ಶನ ಗುಡಾರವಿತ್ತು ದೇವರ ಪ್ರಸನ್ನತೆ ಮೇಘದೋಪಾದಿಯಲ್ಲಿ ದೇವದರ್ಶನದ ಸುತ್ತವಿರುವುದನ್ನು

ಅವರು ನೋಡಬಹುದಾಗಿತ್ತು. ಅದು ಮುಂದೆ ಸರಿದಾಗ ಎಲ್ಲರೂ ಮುಂದೆ ಹೋಗುವ ಸಮಯ ಬಂತೆಂದು ಸಿದ್ಧಪಡಿಸಿಕೊಂಡು ಹೊರಡುತ್ತಿದ್ದರು. ಹಗಲಿನಲ್ಲಿ ಮೇಘಸಂಭವವಾಗಿಯೂ ಇರುಳಿನಲ್ಲಿ ಅಗ್ನಿಸ್ತಂಭವಾಗಿಯು ಇರುತ್ತಿದ್ದ ದೇವರ ಪ್ರಸನ್ನತೆ ಆತನ ಪ್ರೀತಿ ಮತ್ತು ಪರಾಂಬರಿಕೆಯನ್ನು ಸ್ಥಿರವಾಗಿ ನೆನಪಿಸುತ್ತಿತ್ತು.

ಸಬ್ಬತ್ತಿನ ವಿಶ್ರಾಂತಿಯ ಬಗ್ಗೆ ಅವರಿಗೆ ಕೊಡಲ್ಪಟ್ಟಿದ್ದ ವೈಯಕ್ತಿಕವಾದ ಜ್ಞಾಪಕ ಯಾವುದು? ವಿಮೋಚನಕಾಂಡ 16:14–31ನ್ನು ಓದಿರಿ. ಒಂದು ಜನಪ್ರಿಯ ದೈವಶಾಸ್ತ್ರಕ್ಕೆ ವಿರುದ್ಧವಾಗಿ ಏಳನೇ ದಿನದ ಸಬ್ಬತ್ತು ಸಿನಾಯಿ ಬೆಟ್ಟದಲ್ಲಿ ನ್ಯಾಯ ಪ್ರಮಾಣ ಕೊಡುವುದಕ್ಕಿಂತ ಮುಂಚೆಯೇ ಇತ್ತು ಎಂಬುದನ್ನು ಈ ವಚನಗಳು ಸಾಬೀತುಪಡಿಸುತ್ತವೆ.

ಇಲ್ಲಿ ಏನಾಯ್ತು? ಇಸ್ರಾಯೇಲ್ಯರಿಗೆ ಅಡವಿಯಲ್ಲಿ ಆಹಾರಕ್ಕಾಗಿ ವಿಶೇಷವಾದ ಪದಾರ್ಥವನ್ನು ದೇವರು ಒದಗಿಸಿದನು. ಇದು ದೇವರು ತನ್ನ ಸೃಷ್ಟಿಯನ್ನು ಪೋಷಿಸುತ್ತಾನೆ ಎನ್ನುವುದಕ್ಕೆ ನಿತ್ಯದ ಜ್ಞಾಪಕವಾಗಿತ್ತು. ಕಣ್ಣಿಗೆ ಕಾಣುವ ಹಾಗೆ ದೇವರು ಅವರ ಅಗತ್ಯತೆಗಳನ್ನು ಪೂರೈಸುತ್ತಿದ್ದನು. ಪ್ರತಿದಿನವು ಈ ಅದ್ಭುತವು ಸೂರ್ಯನೊಂದಿಗೆ ಕಾಣಿಸಿಕೊಂಡು ಸೂರ್ಯನೊಂದಿಗೆ ಮರೆಯಾಗುತ್ತಿತ್ತು. ಯಾರಾದರೂ ಎಂದಾದರೂ ಅದನ್ನು ಹೆಚ್ಚಾಗಿ ಸಂಗ್ರಹಿಸಿಕೊಂಡರೆ ಅದು ಮರುದಿನವೇ ಹುಳು ಹಿಡಿಯುತ್ತಿತ್ತು. ಆದರೆ ಆರನೇದಿನ ಶುಕ್ರವಾರ ಮಾತ್ರ ಪ್ರತಿದಿನದ ಎರಡರಷ್ಟು ಪ್ರಮಾಣದಲ್ಲಿ ಕೊಡಿಸಿಕೊಂಡದ್ದು ಸಬ್ಬತ್ತಿನಲ್ಲಿ ತಿನ್ನಲ್ಪಡುತ್ತಿತ್ತು. ಅದು ಕೆಟ್ಟುಹೋಗುತ್ತಿರಲಿಲ್ಲ.

ಇಸ್ರಾಯೇಲ್ಯರಿಗೆ ಈವಾಗ ದೇವದರ್ಶನ ಗುಡಾರದ ಸೇವೆಗಳು ಮತ್ತು ಯಾಜಕಕಾಂಡ, ಅರಣ್ಯಕಾಂಡದಲ್ಲಿರುವ ಎಲ್ಲಾ ಆಜ್ಞೆಗಳು ಮತ್ತು ನೇಮಗಳು ಅವರಿಗೆ ಕೊಡಲ್ಪಟ್ಟವು. ವಯಸ್ಸು ಕಳೆದ ಮೋಶೆಯು ಈಗಲೂ ಎಲ್ಲರನ್ನೂ ಕರೆದು ಅವರ ಚರಿತ್ರೆಯನ್ನು ಮತ್ತೆ ಅವರ ಕಣ್ಣಮುಂದೆ ತಂದನು ಮತ್ತು ದೇವರು ಕೊಟ್ಟ ಎಲ್ಲಾ ಆಜ್ಞೆಗಳನ್ನು ಮತ್ತೆ ಜ್ಞಾಪಿಸಿದನು (ಧ.ಕಾಂಡ 5:6–22).

ಈ ಹೊಸ ಸಂತತಿಯು ಅಂತಿಮವಾಗಿ ವಾಗ್ದಾನದ ದೇಶವನ್ನು ಪ್ರವೇಶ ಮಾಡಿತು. ಈವಾಗ ಇಸ್ರಾಯೇಲ್ಯರಿಗೆ ನಾಯಕತ್ವದ ಬದಲಾವಣೆಯಾಯ್ತು, ಈ ಸಂತತಿಯು ತಾವು ಯಾರು ತಮ್ಮ ಜೀವನೋದ್ದೇಶವೇನೆಂಬುದನ್ನು ಮೋಶೆಯು

ಅವರಿಗೆ ಖಾತ್ರಿಪಡಿಸಿದನು. ಅವರ ಪಿತೃಗಳು ಮಾಡಿದ ತಪ್ಪನ್ನು ಅವರು ಮಾಡಬಾರದೆಂದು ಅವನು ಅವರಿಗೆ ಬುದ್ಧಿ ಹೇಳಿದನು. ಆದುದರಿಂದ ಅವನು ಜೀವರ ನೇಮಗಳನ್ನು ಆಜ್ಞೆಗಳನ್ನು ಸಿದ್ಧಪಡಿಸಿದನು. ಈ ಜನರು ಕಾನಾನ್ ದೇಶವನ್ನು ವಶಪಡಿಸಿಕೊಂಡಾಗ ಮೈಮರೆಯಬಾರದೆಂದು ಹತ್ತು ಕಟ್ಟಲೆಗಳನ್ನು ತಿರುಗಿ ಬೋಧಿಸಿದನು.

ನಮ್ಮ ವೈಯಕ್ತಿಕ ಅನುಭವದಂತೆ ಕ್ರಿಸ್ತನ ಎರಡನೇ ಬರೋಣವು ನಾವು ಸತ್ತ ಕೆಲವು ಕ್ಷಣಗಳು ಕಳೆದ ಬಳಿಕ ಆದುದರಿಂದ ಅವನ ಬರೋಣವು ಯಾವಾಗಲೂ ಹತ್ತಿರವಿರುತ್ತದೆ. ನಾವು ನೆನಸುವುದಕ್ಕಿಂತ ಶೀಘ್ರವೇ ಇರಬಹುದು. ಸಬ್ಬತ್ತನ್ನು ದೇವರು ಈವಾಗ ನಮಗೆ ಏನು ಮಾಡಿದ್ದಾನೆ ಮತ್ತು ಆತನು ಬಂದಾಗ ಏನು ಮಾಡುತ್ತಾನೆ ಹೇಗೆ ಎಂಬುದನ್ನು ಜ್ಞಾಪಕಪಡಿಸುತ್ತದೆ?

**ಬುಧವಾರ** **ಆಗಸ್ಟ್ 25**

## ವಿಶ್ರಾಂತಿ ಹೊಂದಲು ಮತ್ತೊಂದು ಕಾರಣ

ಇಸ್ರಾಯೇಲ್ಯರು ಯೋರ್ದಾನ್ ನದಿಯ ಪೂರ್ವದಿಕ್ಕಿನಲ್ಲಿ ಪಾಳೆಯ ಮಾಡಿಕೊಂಡಿದ್ದರು. ಬಾಷಾನಿನ ಅರಸನಿಗೆ ಸೇರಿದ ಪ್ರಾಂತ್ಯವನ್ನು ಮತ್ತು ಅಮೋರಿಯರ ಇಬ್ಬರು ಅರಸರ ಪ್ರಾಂತ್ಯವನ್ನು ವಶಪಡಿಸಿಕೊಂಡಿದ್ದರು. ಆವಾಗಲೂ ಮೋಶೆಯು ಇಸ್ರಾಯೇಲ್ಯರನ್ನು ಒಟ್ಟಾಗಿ ಕರೆದು ಸಿನಾಯಿ ಬೆಟ್ಟದಲ್ಲಿ ಕೊಟ್ಟ ಒಡಂಬಡಿಕೆಯ ನಿಮ್ಮ ಪಿತೃಗಳಿಗೆ ಮಾತ್ರವಲ್ಲ ನಿಮಗೂ ಸಹಾ ಅನ್ವಯವಾಗುತ್ತದೆ ಎಂದು ಹೇಳಿದನು. ಮತ್ತು ಅವರ ಒಳ್ಳೆಯದಕ್ಕಾಗಿ ಆತನು ಹತ್ತುಕಟ್ಟಳೆಗಳನ್ನು ಮತ್ತೆ ಉಪದೇಶಿಸಿದನು.

ವಿಮೋಚನಕಾಂಡ 20:8–11 ವಚನಗಳನ್ನು ಧರ್ಮೋಪದೇಶಕಾಂಡ 5:12–15 ವಚನಗಳಿಗೆ ಹೋಲಿಸಿರಿ. ಸಬ್ಬತ್ತಿನ ಆಜ್ಞೆಯ ವಿವರಣೆಯ ರೀತಿಯಲ್ಲಿ ಯಾವ ವ್ಯತ್ಯಾಸವಿದೆ?

ವಿಮೋಚನಕಾಂಡ 20:8ರಲ್ಲಿ "ಜ್ಞಾಪಕದಲ್ಲಿಡು" ಎಂದು ಪದವು ಬರುತ್ತದೆ. ಧರ್ಮೋಪದೇಶಕಾಂಡ 5:12ರಲ್ಲಿ ಆಚರಿಸು" ಎಂಬ ಪದವು ಮೊದಲು ಬರುತ್ತದೆ ಮತ್ತು ಸ್ವಲ್ಪ ಮುಂದೆ 'ಜ್ಞಾಪಕದಲ್ಲಿಡು' ಎಂಬ ಪದವು ಬರುತ್ತದೆ (ಧ.ಕಾಂಡ

5:15). ಈ ವಚನ ಇಸ್ರಾಯೇಲ್ಯರಿಗೆ ತಾವು ದಾಸತ್ವದಲ್ಲಿದ್ದುದನ್ನು ಜ್ಞಾಪಕ ಮಾಡಿಕೊಳ್ಳಲು ಹೇಳುತ್ತದೆ. ಈ ಸಂತತಿಯು ಈವಾಗ ಸ್ವತಂತ್ರರಾಗಿ ಬೆಳೆದಿದ್ದರೂ ಇವರನ್ನು ಅದ್ಭುತ ರೀತಿಯಲ್ಲಿ ಪಾರು ಮಾಡದಿದ್ದರೆ ದಾಸತ್ವದಲ್ಲಿಯೇ ಹುಟ್ಟಿ ಬೆಳೆಯುತ್ತಿದ್ದರು.

ಸೃಷ್ಟಿಯ ಕಥೆಯಲ್ಲಿ ಸೃಷ್ಟಿಯ ಚಟುವಟಿಕೆಯಲ್ಲಿ ನಿರತನಾಗಿದ್ದ ದೇವರೇ ಅವರ ಬಿಡುಗಡೆಯ ಕೆಲಸದಲ್ಲಿ ನಿರತನಾಗಿದ್ದಾನೆಂಬುದನ್ನು ಸಬ್ಬತ್ತಿನ ಆಜ್ಞೆಯು ಅವರಿಗೆ ಜ್ಞಾಪಿಸುತ್ತದೆ: "ನಿಮ್ಮ ದೇವರಾದ ಯೆಹೋವನು ಭುಜಬಲದ ಪರಾಕ್ರಮದಿಂದಲೂ ಶಿಕ್ಷಾಹಸ್ತದಿಂದಲೂ ನಿಮ್ಮನ್ನು ಬಿಡುಗಡೆ ಮಾಡಿದ್ದನ್ನು ಜ್ಞಾಪಕ ಮಾಡಿಕೊಳ್ಳಿರಿ" (ಧ.ಕಾಂಡ 5:15).

ಈ ಸನ್ನಿವೇಶದಲ್ಲಿ ಈ ಸತ್ಯವು ಇಸ್ರಾಯೇಲ್ಯರಿಗೆ ಸರಿಯಾಗಿ ಒಪ್ಪುತ್ತದೆ ನಾಲ್ವತ್ತು ವರ್ಷಗಳ ಹಿಂದೆ ತಮ್ಮ ಪಿತೃಗಳು ವಾಗ್ದಾನ ದೇಶಕ್ಕೆ ಪ್ರವೇಶಿಸಲಾರದೆ ಸೋತು ಹೋದರೋ ಈವಾಗ ಅದರ ಗಡಿಯಲ್ಲಿ ಎರಡನೆಯ ಸಲ ನಿಂತುಕೊಂಡಿದ್ದಾರೆ. ಅವರು ತಮ್ಮ ಪಿತೃಗಳು ಹೇಗೆ ಅಸಹಾಯಕಾಗಿದ್ದರೋ ಹಾಗೆಯೇ ಇವರೂ ಸಹಾ ಅಸಹಾಯರಾಗಿ ವಾಗ್ದಾನಮಾಡಿದ ದೇಶವನ್ನು ವಶಪಡಿಸಿಕೊಳ್ಳರಾದೆ ಹೋದರು. ಆದುದರಿಂದ ಭುಜಬಲ ಪರಾಕ್ರಮದಿಂದ ನಡೆಸುವ ದೇವರ ಸಹಾಯ ಅವರಿಗೆ ಬೇಕಾಗಿತ್ತು.

ಸಬ್ಬತ್ತು ಇನ್ನೂ ಹೆಚ್ಚಿನ ಆಯಾಮವನ್ನು ಪಡೆದುಕೊಳ್ಳುವುದಕ್ಕಿತ್ತು. ಯಾಕೆಂದರೆ ದೇವರು ಅವರನ್ನು ಬಿಡಿಸುವಾತನಾಗಿದ್ದರಿಂದ ಅವರು ಸಬ್ಬತ್ತನ್ನು ಕೈಕೊಂಡು ನಡೆಯಬೇಕಾಗಿತ್ತು (ಧ.ಕಾಂಡ 5:15).

ಧ.ಕಾಂಡದಲ್ಲಿ ಸಬ್ಬತ್ತನ್ನು ಯಾಕೆ ಕೈಗೊಳ್ಳಬೇಕು ಎಂಬ ಕಾರಣವನ್ನು ತಿಳಿಸಿದ್ದರೂ ಖಂಡಿತವಾಗಿ, ಸೃಷ್ಟಿಯು ಎಂದಿಗೂ ಸಬ್ಬತ್ತಿನ ಆಜ್ಞೆಗೆ ದೂರವಲ್ಲ. ಒಂದು ರೀತಿಯಲ್ಲಿ ಇಸ್ರಾಯೇಲ್ಯರು ಐಗುಪ್ತದೇಶದಿಂದ 'ಬಿಡುಗಡೆ' ಹೊಂದಿದ್ದು ಅವರ ಹೊಸ ಸೃಷ್ಟಿಯ ಆರಂಭವಾಗಿದೆ, ಇದು ಆದಿಕಾಂಡ ಪುಸ್ತಕದ ಸೃಷ್ಟಿಯ ಕಥೆಯಂತಿದೆ. ಬಿಡುಗಡೆ ಹೊಂದಿದವರಾದ ಇಸ್ರಾಯೇಲ್ಯರು ದೇವರ ಹೊಸಸೃಷ್ಟಿಗಳಾದರು (ಉದಾಹರಣೆಗೆ ಯೆಶಾಯ 43:15ನ್ನು ಸಹಾ ನೋಡಿರಿ).

ವಿಮೋಚನೆಯು ಪಾಪದಿಂದ ಬಿಡುಗಡೆ ಹೊಂದುವುದಕ್ಕೆ ಸಂಕೇತವಾಗಿರುವುದರಿಂದ ಸಬ್ಬತ್ತು ಸೃಷ್ಟಿ ಮತ್ತು ಬಿಡುಗಡೆ ಎರಡಕ್ಕೂ ಗುರುತಾಗಿದೆ (ಸಂಕೇತವಾಗಿದೆ). ಆದುದರಿಂದ ನಿಜವಾದ ರೀತಿಯಲ್ಲಿ ಸಬ್ಬತ್ತು ನಮ್ಮ ಸೃಷ್ಟಿಕರ್ತನಾದ ವಿಮೋಚನಾದ ಯೇಸುಕ್ರಿಸ್ತನನ್ನು ಸೂಚಿಸುತ್ತದೆ. ಯೋಹಾನ 1:1–13 ವಚನಗಳನ್ನು ಓದಿರಿ. ಯೇಸುಕ್ರಿಸ್ತನು ನಮ್ಮ ಸೃಷ್ಟಿಕರ್ತನು ಮತ್ತು ವಿಮೋಚಕನು (ರಕ್ಷಕನು) ಎಂಬುದರ ಬಗ್ಗೆ ಈ ವಚನಗಳು ನಮಗೆ ಏನನ್ನು ಬೋಧಿಸುತ್ತವೆ?

**ಗುರುವಾರ** **ಆಗಸ್ಟ್ 26**

## ಸಬ್ಬತ್ತನು ಕೈಗೊಳ್ಳುವುದು

ದೇವರು ತನ್ನ ಜನರಿಗೆ ಸಬ್ಬತ್ತನ್ನು ಕೈಗೊಂಡು ನಡೆಯಬೇಕೆಂದು ಆಜ್ಞೆ ಮಾಡಿದನು. ನರಹತ್ಯೆ ಮಾಡಬಾರದು. ಕಳ್ಳತನ ಮಾಡಬಾರದು ಎಂಬ ಆಜ್ಞೆಗಳೊಂದಿಗೆ ಸಬ್ಬತ್ತನ್ನು ದೇವರ ದಿನವೆಂದು ಆಚರಿಸಬೇಕು ಎಂಬ ಆಜ್ಞೆಯೂ ಕೊಡಲ್ಪಟ್ಟಿದೆ. ಇದನ್ನು ನಿರ್ದಿಷ್ಟವಾಗಿ ಹೀಗೆಯೇ ಆಚರಿಸಬೆಕೆಂಬ ಸವಿವರಣೆಯನ್ನು ಸತ್ಯವೇದವು ನೀಡುವುದಿಲ್ಲ.

ನಾವು ಸಬ್ಬತ್ತಿನ ದಿನದಲ್ಲಿ ಯಾವ ಪರಿಸರವನ್ನು ಸೃಷ್ಟಿಸಿ ಅದನ್ನು ಉತ್ತೇಜಿಸಬೇಕು? (ಕೀರ್ತನೆ 92 ಮತ್ತು ಯೆಶಾಯ 58:13 ನೋಡಿರಿ).

ಯಾಕೆಂದರೆ ಸಬ್ಬತ್ತನ್ನು ಕೈಗೊಳ್ಳುವುದು ಎಂದರೆ 'ಸೃಷ್ಟಿ ಮತ್ತು ವಿಮೋಚನೆ'ಯನ್ನು ಸಂಭ್ರಮದಿಂದ ಆಚರಿಸುವುದು, ಆವಾಗ ನಮ್ಮ ಪರಿಸರವು ಉಲ್ಲಾಸಕರವು ಆಗಿದ್ದು ನಾವು ಕರ್ತನಲ್ಲಿ ಸಂತೋಷಿಸುವವರಾಗಿರಬೇಕು. ದುಃಖದಲ್ಲಿರಬಾರದು. ಸಬ್ಬತ್ತನ್ನು ಆಚರಣೆ ತರುವುದಕ್ಕೆ ನಾವು ಏಳನೇ ದಿನದಲ್ಲಿ ಜ್ಞಾಪಿಸಿಕೊಳ್ಳಬೇಕು ಎಂಬ ಅರ್ಥ ಬರುವುದಿಲ್ಲ. ಮೊದಲನೇ ಸಬ್ಬತ್ತು ಸೃಷ್ಟಿಯ ವಾರವನ್ನು ಪೂರ್ಣಗೊಳಿಸುವುದರಿಂದ, ನಾವು ಸಬ್ಬತ್ತಿನ ದಿನವನ್ನು ವಾರದ ಎಲ್ಲಾ ದಿನಗಳಲ್ಲೂ ಜ್ಞಾಪಕದಲ್ಲಿಟ್ಟುಕೊಂಡು ಅದನ್ನು ಪರಿಶುದ್ಧವಾದ ರೀತಿಯಲ್ಲಿ ಪಾಲಿಸುವುದಕ್ಕೆ ತಕ್ಕ ಸಿದ್ಧತೆಗಳನ್ನು ಮತ್ತು ಏರ್ಪಾಡುಗಳನ್ನು ಮುಂಚಿತವಾಗಿಯೇ ಮಾಡಿಕೊಂಡು ಅದಕ್ಕಾಗಿ ಕಾಯಬೇಕು. ನಾವು ಮನಃಪೂರ್ವಕವಾಗಿ ವಾರವೆಲ್ಲ ಸಿದ್ಧಪಡಿಸಿಕೊಳ್ಳ-ಬೇಕು ಮತ್ತು ವಿಶೇಷವಾಗಿ ಸೌರಣೆದಿನ (ಮಾರ್ಕ 15:42). ಶುಕ್ರವಾರವು

ಸಿದ್ಧಪಡಿಸಿಕೊಳ್ಳುವ ದಿನವಾಗಿದೆ. ಈ ದಿನಕ್ಕಾಗಿ ಎದುರು ನೋಡುವಾಗ ನಮಗೆ ಸಂತೋಷವು ವೃದ್ಧಿಯಾಗುತ್ತದೆ.

ಸಬ್ಬತ್ತು ಆಚರಣೆಯ ಯಾವ ಮುಖ್ಯವಾದ ಅಂಶವನ್ನು ಯಾಜಕಕಾಂಡ 19:3ನೇ ವಚನವು ಎತ್ತಿ ಹೇಳುತ್ತದೆ?

ಸಬ್ಬತ್ತನ್ನು ನಾವು ಕೈಗೊಂಡು ನಡೆಯುವಾಗ ನಾವು ನಮ್ಮ ಕುಟುಂಬದ ಮತ್ತು ಸ್ನೇಹಿತರ ಸಂಬಂಧವನ್ನು ಸಹಾ ಪೋಷಣೆ ಮಾಡಿಕೊಳ್ಳಬಹುದಾಗಿದೆ. ದೇವರು ನಮಗೆ ಇಡೀ ಕುಟುಂಬದ ಜೊತೆ ಹೆಚ್ಚಿನ ಅನ್ಯೋನ್ಯತೆ ಹೊಂದಲು ಸಮಯ ಒದಗಿಸುತ್ತಾನೆ. ಮಾತ್ರವಲ್ಲದೆ ಕೆಲಸದ ಆಳುಗಳು, ದುಡಿಯುವ ಎತ್ತು, ಕತ್ತೆ, ಕುದುರೆ ಮುಂತಾದ ಪ್ರಾಣಿಗಳಿಗೂ ವಿಶ್ರಾಂತಿ ಸಿಗುತ್ತದೆ (ವಿ.ಕಾಂಡ 20:8–11) ಆವಾಗ ಸಬ್ಬತ್ತು ಮತ್ತು ಕುಟುಂಬವು ಒಟ್ಟಾಗಿ ಹೋಗುತ್ತವೆ.

ವಿಶ್ರಾಂತಿ ಮತ್ತು ಕೌಟುಂಬಿಕ ಸಮಯ ಮುಖ್ಯವಾದ ನಿಯಮವಾಗಿರುವಂತೆಯೇ, ಸಬ್ಬತ್ತು ಎಂದರೆ ಸಮೂಹದಲ್ಲಿ ಭಾಗವಹಿಸುವುದೂ ಆಗಿದೆ.

ನಾವು ನಮ್ಮ ಸಭೆಯೆಂಬ ದೊಡ್ಡಕುಟುಂಬದೊಡನೆ ಶ್ರದ್ಧೆಯಿಂದ ಆರಾಧನೆ ಮಾಡುವುದೂ ಆಗಿದೆ. ಯೇಸುಕ್ರಿಸ್ತನು ಈ ಭೂಮಿಯ ಮೇಲಿದ್ದಾಗ ಆರಾಧನೆಯಲ್ಲಿ ಭಾಗವಹಿಸುತ್ತಿದ್ದನು (ಯಾ.ಕಾಂಡ 23:3, ಲೂಕ 4:16 ಮತ್ತು ಇಬ್ರಿಯ 10:25).

ನಾವು ವಾರವೆಲ್ಲಾ ತುಂಬಾ ಕೆಲಸಗಳಲ್ಲಿ ತೊಡಗಿರುವಾಗಲೂ ಹೃದಯದಲ್ಲಿ ಸಬ್ಬತ್ತಿನ ನಿಜವಾದ ವಿಶ್ರಾಂತಿಗಾಗಿ ತುಂಬಾ ತುಡಿಯುತ್ತೇವೆ. ನಮ್ಮನ್ನು ಉಂಟು ಮಾಡಿದಾತನ ಜೊತೆ ನಿಜವಾದ ಅನ್ಯೋನ್ಯತೆಯನ್ನು ಹೊಂದಲು ಬಯಸುತ್ತೇವೆ. ನಾವು ನಮ್ಮೆಲ್ಲ ವ್ಯವಹಾರಗಳನ್ನು ನಿಲ್ಲಿಸಿ ದೇವರ ಮತ್ತು ಪ್ರಕೃತಿಯ ಜೊತೆ ಸಮಯವನ್ನು ಕಳೆಯಲು ಹಂಚಿಕೆ ಮಾಡಿಕೊಂಡಾಗ ನಾವು ಸಬ್ಬತ್ತಿನ ಲಯ ಬದ್ಧತೆ ಮತ್ತು ವಿಶ್ರಾಂತಿಗೆ ಪ್ರವೇಶ ಪಡೆಯಬಹುದು.

ಸಬ್ಬತ್ತಿನ ಜೊತೆ ಮತ್ತು ಅದನ್ನು ಕೈಗೊಳ್ಳುವಾಗ ಉಟಾಗುವ ಆಶೀರ್ವಾದಗಳ ಬಗ್ಗೆ ನಿಮ್ಮ ಅನುಭವವೇನು? ಇದರ ಸಮಯವನ್ನು ಯಾವ ರೀತಿಗಳಲ್ಲಿ ಹೆಚ್ಚು ಪವಿತ್ರಗೊಳಿಸಬಹುದಾಗಿದೆ?

**ಶುಕ್ರವಾರ** **ಆಗಸ್ಟ್ 27**

**ಹೆಚ್ಚಿನ ಚಿಂತನೆ :** "ದೇವರು ತನ್ನ ಸೃಷ್ಟಿಯ ಶಕ್ತಿಯನ್ನು, ಆತನ ಕೈಗಳು ಮಾಡಿದ ಕೆಲಸಗಳಿಂದ ಆತನನ್ನು ಅರಿತುಕೊಳ್ಳುವಂತೆ ಅದಕ್ಕೆ ಒಂದು ಸಬ್ಬತ್ತೆಂಬ ಸ್ಮಾರಕವನ್ನು ಮನುಷ್ಯನಿಗೆ ಕೊಟ್ಟನು. ಸಬ್ಬತ್ತು ನಮಗೆ ದೇವರು ಮಾಡಿದ ಸೃಷ್ಟಿಯ ಕೆಲಸಗಳನ್ನು, ಸೃಷ್ಟಿಕರ್ತನ ಮಹಿಮೆಯನ್ನು ಪರಿಗಣಿಸಲು ನಮಗೆ ಆಹ್ವಾನ ನೀಡುತ್ತದೆ. ಮಿಕ್ಕದಿನಗಳಿಗಿಂತ ವಿಶ್ರಾಂತಿಯ ದಿನದಲ್ಲಿ ನಾವು ದೇವರು ಪ್ರಕೃತಿಯಲ್ಲಿ ಇಟ್ಟಿರುವ ಉಪದೇಶಗಳನ್ನು ಅಧ್ಯಯನ ಮಾಡಬೇಕು. ನಾವು ಪ್ರಕೃತಿಯ ಒಡನಾಟದಲ್ಲಿರುವಾಗ ಕ್ರಿಸ್ತನು ತನ್ನ ಇರುವಿಕೆಯನ್ನು ವಾಸ್ತವವಾಗ ಮಾಡುತ್ತಾನೆ ಮತ್ತು ನಮ್ಮ ಹೃದಯಗಳಿಗೆ ತನ್ನ ಶಾಂತಿ ಮತ್ತು ಪ್ರೀತಿಯ ಬಗ್ಗೆ ಮಾತಾಡುತ್ತಾನೆ". ಎಲೆನ್ ಜಿ ವೈಟಮನವರ 'ಕ್ರೈಸ್ಟ್ಸ್ ಆಬ್ಜೆಕ್ಟ್ ಲೆಸೆನ್ಸ್' ಪುಸ್ತಕದಲ್ಲಿ ಪುಟ 25 ಮತ್ತು 26.

ಇಸ್ರಾಯೇಲ್ಯರನ್ನು ದೇವರು ಐಗುಪ್ತದೇಶದ ದಾಸತ್ವದಿಂದ ಬಿಡಿಸಿದ ಕಾರಣಗಳಲ್ಲಿ ಒಂದು ಕಾರಣ ಯಾವುದೆಂದರೆ ಅವರು ಪರಿಶುದ್ಧವಾದ ಸಬ್ಬತ್ತನ್ನು ಕೈಗೊಂಡು ನಡೆಯಬೇಕೆಂಬುದೇ ಆಗಿತ್ತು. ಮೋಶೆ ಮತ್ತು ಆರೋನರು ಈ ಸಬ್ಬತ್ತಿನ ಪರಿಶುದ್ಧತೆಯ ಬಗ್ಗೆ ಬೋಧನೆಯನ್ನು ಮಾಡತೊಡಗಿದುದು ಇದಕ್ಕೆ ಸಾಕ್ಷಿ. ಫರೋನನು ಸಹಾ ನೀವು ಜನರನ್ನು ಬಿಟ್ಟೀ ಕೆಲಸ ಮಾಡಿಸದೆ ಅವರ ಶ್ರಮೆಯಿಂದ ವಿಶ್ರಾಂತಿ ಪಡೆಯು ಪ್ರಯತ್ನ ಮಾಡುತ್ತಿದ್ದೀರಿ ಎಂದು ಫರೋಹನು ಅವರ ಮೇಲೆ ದೂರು ಹೇಳುತ್ತಾನೆ (ವಿ.ಕಾಂಡ 5:5). ಇದು ಮೋಶೆ ಮತ್ತು ಆರೋನರು ಸಬ್ಬತ್ತಿನ ಸುಧಾರಣೆಯನ್ನು ಐಗುಪ್ತದೇಶದಲ್ಲಿಯೇ ಆರಂಭಿಸಿದರು ಎಂಬುದನ್ನು ತಿಳಿಸುತ್ತದೆ.

ಸಬ್ಬತ್ತನ್ನು ಕೈಗೊಂಡು ಆಚರಿಸುವುದು ಇಸ್ರಾಯೇಲ್ಯರಿಗೆ ಐಗುಪ್ತದೇಶದ ದಾಸತ್ವವನ್ನು ಸ್ಮರಣೆಗೆ ತರುವಂಥದಲ್ಲ. ಇದರ ಆಚರಣೆಯು ಸೃಷ್ಟಿಯ ಜ್ಞಾಪಕದ ಜೊತೆಗೆ ಯಾವ ಐಗುಪ್ತದೇಶದ ಧಾರ್ಮಿಕ ದಬ್ಬಾಳಿಕೆಯಿಂದ ಸಬ್ಬತ್ತಿನ ಆಚರಣೆಯು ಕಷ್ಟವಾಗಿತ್ತೋ ಅದರಿಂದ ಸಿಕ್ಕಿದ ಸಂತೋಷಕರವಾದ ಬಿಡುಗಡೆಯನ್ನು ಸ್ಮರಣೆಗೆ ತರುವಂಥದ್ದಾಗಿದೆ. ದಾಸತ್ವದಿಂದ ಆದ ಬಿಡುಗಡೆಯು ಅವರ ಹೃದಯದಲ್ಲಿ ಬಡವರಿಗೆ ತುಳಿತಕ್ಕೊಳಗಾದವರಿಗೆ, ತಂದೆಯಿಲ್ಲದವರಿಗೆ ಮತ್ತು ವಿಧವೆಯರಿಗೆ

ಕರುಣಭಾವವು ಹರಿಯುತ್ತದೆ". Appendix note from Eternity past, ಪುಟ 549.

## ಚರ್ಚಿಸಬೇಕಾದ ಪ್ರಶ್ನೆಗಳು

1. ಕೆಲವು ಕ್ರೈಸ್ತರು, ಇದರಲ್ಲಿ ಕೆಲವು ಅಡ್ವೆಂಟಿಸ್ಟರು ಸೇರುತ್ತಾರೆ. ಇವರು ದೈವ ವಿಕಸನದ ಸೃಷ್ಟಿಯನ್ನು ಪ್ರತಿಪಾದಿಸುತ್ತಾರೆ. ಈ ಪ್ರತಿಪಾದನೆ ಮತ್ತು ಅಡ್ವೆಂಟಿಸ್ಟರ ಎರಡಕ್ಕೂ ಹೊಂದಿಕೆಯಾಗುವುದಿಲ್ಲ ಹೇಗೆ? ದೇವರವಾಕ್ಯವು ವಿಶದವಾಗಿ ಸಬ್ಬತ್ತು ಮೊದಲ ಆರು ದಿನಗಳ ಬಳಿಕ ಬರುತ್ತದೆ ಎಂದು ಹೇಳಿರುವಾಗ ದೈವ ವಿಕಸನವು ಸಬ್ಬತ್ತನ್ನು ಬಿಲಿಯನ್ ವರ್ಷಗಳ ಬಳಿಕ ಆಚರಿಸಲ್ಪಟ್ಟಿತು ಎಂದು ಹೇಳುವುದು ಹೇಗೆ?

2. ಯಾವ ದಿನವಾದರೇನು, ದಿನ ಯಾವುದಾದರೂ ಸರಿ, ವಾರದ ಮತ್ಯಾವುದೇ ಒಂದು ದಿನದಲ್ಲಿ ವಿಶ್ರಾಂತಿ ಹೊಂದಬೇಕು ಅಷ್ಟೇ ಎಂದು ವಾದ ಮಾಡುವವರಿಗೆ ನೀವೇನು ಹೇಳುವಿರಿ? ಮತ್ತೆ ಕೆಲವರು ಯೇಸುವೇ ನನ್ನ ವಿಶ್ರಾಂತಿ ಆದುದರಿಂದ ನಾವು ಯಾವುದೇ ದಿನವನ್ನು ವಿಶ್ರಾಂತಿಯ ದಿನವೆಂದು ಆಚರಿಸಬೇಕಾಗಿಲ್ಲ ಎಂದು ಹೇಳುತ್ತಾರೆ ಅಂಥವರಿಗೆ ನೀವು ಹೇಗೆ ಉತ್ತರ ಕೊಡುವಿರಿ?

3. ಸಬ್ಬತ್ತನ್ನು ಕೈಗೊಂಡು ನಡೆಯುವುದು ಹೇಗೆ ಸ್ವಾತಂತ್ರ್ಯದ ಮತ್ತು ಬಿಡುಗಡೆಯ ಸ್ಮರಣೆಯಾಗುತ್ತದೆ? ನಾವು ಹೇಗೆ ಕಟ್ಟುನಿಟ್ಟಿನ ಕರ್ಮಪ್ರಧಾನವಾದ ಕ್ರೈಸ್ತರಾಗಿರಬಾರದು?

4. ಕೆಲವರು ಏಳನೇ ದಿನದ ಸಬ್ಬತ್ತನ್ನು ಕೈಗೊಂಡು ನಡೆಯುವುದು ನಾವು ಪರಲೋಕಕ್ಕೆ ಮಾಡುವ ಸ್ವಪ್ರಯತ್ನ ಎಂದು ಹೇಳುತ್ತಾರೆ. ಏನೇ ಆಗಲಿ, ಸಬ್ಬತ್ತಿನ ದಿನದಲ್ಲಿ ವಿಶ್ರಾಂತಿಪಡೆಯಬೇಕು ಮತ್ತು ಪಡೆದು ನಮ್ಮ ಪರಲೋಕಕ್ಕೆ ಸೇರುವ ಪ್ರಯತ್ನ ಮಾಡುವುದಲ್ಲಿ ಏನು ತಾರ್ಕಿಕತೆ ಇದೆ?